ಬಂಟರ ಸಂಘ ಬೆಂಗಳೂರು
BUNTS' SANGHA BANGALORE
www.buntsanghablr.com

# ಸ್ನೇಹ ಚಿಂತನೆ

ಮಾಸ ಪತ್ರಿಕೆ

ಸೆಪ್ಟೆಂಬರ್ 2021
ಸಂಪುಟ 17, ಸಂಚಿಕೆ ೦
ಸಂಚಿಕೆ ಬೆಲೆ ರೂ. 1/-

324, Chord Road
Vijayanagara
Bengaluru - 560 040.
Ph: 080 2339 9323, 2339 9635
E: info@buntsanghablr.com






ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ – I & II – ಸ್ವಾತಂತ್ರ್ಯೋತ್ಸವ ದಿನಾಚರಣೆ



ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ – II "ಸರಸ್ವತಿ ಪೂಜೆ"

ಶ್ರದ್ಧಾಂಜಲಿ



ದಿ. ಕಾಪು ದಿವಾಕರ ಶೆಟ್ಟಿ
ಮಾಜಿ ಅಧ್ಯಕ್ಷರು, ಬಂಟರ ಸಂಘ ಬೆಂಗಳೂರು


PRIME castle's
Neighbourhood
LUXURY APARTMENT Elite
Arkavathy Layout, Sampigehalli, BENGALURU
APPROVED RERA APPROVED
JUST PAY 1 Lakhs *
Budget Flats
30 Lakhs * Onwards
VS BUILDER
VIVA MARINA
Adi Udupi, on Malpe Road, UDUPI
ROYAL RICH
Kalkere, Bengaluru
NIKITHA PARADISE
Banjara Layout, Bengaluru
BEST INVESTMENT WITH ASSURED RENTAL RETURN
www.theprimecastle.com
+91 98456 71100
+91 98450 90689
No. 982, HBR Layout, 1st Stage, 2nd Block,
80th feet Road, Bangalore 560045
info@theprimecastle.com

ADVT.

# ಸ್ನೇಹ ಚಿಂತನೆ

*Monthly Magazine Published by*

**BUNTS' SANGHA BANGALORE**

**VOL. 17** | **SEPTEMBER 2021** | **ISSUE 05**



**ಸಾಹಿತ್ಯ–ಪ್ರಕಾಶನ ಸಮಿತಿ**

ಚೇರ್‌ಪರ್ಸನ್ ಮತ್ತು ಗೌ॥ ಸಂಪಾದಕರು :
**ಶ್ರೀ ಎಂ. ಮುರಲೀಧರ ಹೆಗ್ಡೆ**

ಸಲಹಾ ಮಂಡಳಿ :
**ಶ್ರೀ ಎ. ಗಿರೀಶ್ ರೈ**
**ಶ್ರೀ ಸತ್ಯಾನಂದ ಮೇಲಾಂಟ ಎನ್.**
**ಶ್ರೀ ಪ್ರಕಾಶ್ ಶೆಟ್ಟಿ**

ಸಂಪಾದಕ ಮಂಡಳಿ :
**ಶ್ರೀಮತಿ ಸ್ಮಿತಾ ಬಲ್ಲಾಳ್**
**ಶ್ರೀಮತಿ ನಿರ್ಮಲಾ ಸಿ. ರೈ**
**ಕುಮಾರಿ ಶಾಲ್ಮಲೀ ಸುರೇಶ್**
**ಶ್ರೀಮತಿ ಶ್ಯಾಮಲಾ ಶೆಟ್ಟಿ**
**ಶ್ರೀಮತಿ ಅನುಷಾ ಶೆಟ್ಟಿ**

ಪೋಷಕ ಸದಸ್ಯರು :
**ಶ್ರೀಮತಿ ಮನೋರಮ ಚೌಟ**
**ಶ್ರೀಮತಿ ವೇದ ಎಸ್. ಶೆಟ್ಟಿ**
**ಶ್ರೀ ಬಿ. ಕುಸುಮಾಕರ ಶೆಟ್ಟಿ**
**ಶ್ರೀ ಆರ್.ಎಸ್. ಶೆಟ್ಟಿ**
**ಶ್ರೀಮತಿ ವಸಂತಿ ಪಿ. ಶೆಟ್ಟಿ**
**ಶ್ರೀ ಪ್ರಕಾಶ್ ಶೆಟ್ಟಿ**
**ಶ್ರೀ ಎ.ಜೆ. ಶೆಟ್ಟಿ**
**ಶ್ರೀಮತಿ ಗೀತ ಭಗವಾನ್‌ದಾಸ್ ರೈ**
**ಶ್ರೀ ಕೆ. ಶಂಕರ್ ಶೆಟ್ಟಿ ಹುಬ್ಬಳ್ಳಿ**
**ಶ್ರೀ ಶ್ರೀನಿವಾಸ ಸೂಡ**

ಪ್ರಕಾಶಕರು :
**ಮಧುಕರ ಎಂ. ಶೆಟ್ಟಿ**



ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ.

– ಸಂಪಾದಕ ಮಂಡಳಿ


## ಒಳ ಪುಟಗಳಲ್ಲಿ...


| | | ಪುಟ |
|---|---|---|
| 1. | ಸಂಪಾದಕೀಯ | 2 |
| 2. | ಅಧ್ಯಕ್ಷರ ಮಾತು | 3 |
| 3. | ಗೌರವ ಕಾರ್ಯದರ್ಶಿಗಳ ವರದಿ | 4 |
| 4. | ಡಾ। ಎಚ್.ಎಸ್. ಬಲ್ಲಾಳರ ಉದ್ಯೋಗ ಪರ್ವದ ಸುವರ್ಣ ಸಂಭ್ರಮ | 5 |
| 5. | Forgotten Bunt Wedding rituals | 6 |
| 6. | ಬೈಂದೂರು ಬಂಟರ ಸಂಘದ ಕಾರ್ಯಕ್ರಮ | 14 |
| 7. | ದಿ। ಕಾಪು ದಿವಾಕರ ಶೆಟ್ಟಿಯವರಿಗೆ ನುಡಿ ನಮನ | 15 |
| 8. | ಬಂಟರ ಸಂಘ RNSV II – ಸರಸ್ವತಿ ಪೂಜೆ | 18 |
| 9. | ಆಕ್ಸಿಜನ್ ಅಭಿಯಾನ | 19 |
| 10. | ಶಿರೂರು ಬಂಟರ ಸಂಘದ ಕಾರ್ಯಕ್ರಮ | 21 |
| 11. | Independence Day Celebrations at BSRNSV I & II | 22 |


**ಮುಖಪುಟ**

**ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ-I ಮತ್ತು II ರಲ್ಲಿ ಸ್ವಾತಂತ್ರ್ಯ ದಿನಾಚರಣೆ**

**ವಿದ್ಯಾನಿಕೇತನ-II ರಲ್ಲಿ ಸರಸ್ವತಿ ಪೂಜೆ**

**ದಿ॥ ಕಾಪು ದಿವಾಕರ ಶೆಟ್ಟಿಯವರಿಗೆ ಶ್ರದ್ಧಾಂಜಲಿ**

# ಸಂಪಾದಕೀಯ



## ಸಮಯ ಪ್ರಜ್ಞೆ – ಸಮಯದ ಮಹತ್ವ

ಸುಮಾರು 1993ರ ಸಮಯ, ಹೆಸರಾಂತ ಸಾಹಿತಿ ಮತ್ತು ಚಲನಚಿತ್ರ ನಿರ್ದೇಶಕ ಶ್ರೀ ನಾಗತಿಹಳ್ಳಿ ಚಂದ್ರಶೇಖರ್‌ರವರ ಒಂದು ಕಾರ್ಯಕ್ರಮ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಜರುಗಿತ್ತು. ಈ ಕಾರ್ಯಕ್ರಮಕ್ಕೆ ಡಾ। ಶಿವರಾಮ ಕಾರಂತರನ್ನು ಮುಖ್ಯ ಅತಿಥಿಯಾಗಿ ಆಹ್ವಾನಿಸಿದ್ದರು. ಡಾ। ಕಾರಂತರನ್ನು ವಿಮಾನ ನಿಲ್ದಾಣದಿಂದ ಬರಮಾಡಿಕೊಂಡು, ಹೊಟೇಲ್‌ಗೆ ಬಂದು, ಅಲ್ಲಿಂದ ಕಾರ್ಯಕ್ರಮದ ಸ್ಥಳಕ್ಕೆ, ನಂತರ ಮರುದಿನ ವಿಮಾನ ನಿಲ್ದಾಣಕ್ಕೆ ಬಿಟ್ಟುಬರುವವರೆಗಿನ ಜವಾಬ್ದಾರಿಯನ್ನು ಮಿತ್ರ ನಾಗತಿಹಳ್ಳಿಯವರು ನನಗೆ ವಹಿಸಿದ್ದರು. ಹಾಗೆಯೇ ಡಾ। ಕಾರಂತರ ಸಮಯ ಪ್ರಜ್ಞೆಯ ಬಗ್ಗೆಯೂ ವಿವರಿಸಿದ್ದರು. ಹಾಗಾಗಿ ನಾನು ಎಲ್ಲಾ ಸಮಯದಲ್ಲಿಯೂ ನಾನು ಇರಬೇಕಾದ ಸಮಯಕ್ಕಿಂತ 10 ನಿಮಿಷ ಮೊದಲೇ ಇರುತ್ತಿದ್ದೆ. ಡಾ। ಕಾರಂತರನ್ನು ನನ್ನ ಕಾರಿನಲ್ಲಿ ಕೂರಿಸಿಕೊಂಡು ಓಡಾಡುವಾಗ, ಅವರು ಕೇಳುವ ಪ್ರಶ್ನೆಗಳನ್ನೆಲ್ಲಾ ಭಯ, ನಡುಕದಿಂದ ಉತ್ತರಿಸುತ್ತಾ ಹೇಗೋ ಸಮಯಕ್ಕೆ ಸರಿಯಾಗಿ ತಲುಪುವಂತೆ ನೋಡಿಕೊಂಡೆ.

ಸಂಜೆ 5 ಗಂಟೆಗೆ ಕಾರ್ಯಕ್ರಮ. ಶಿವಾನಂದ ಸರ್ಕಲ್ ಹತ್ತಿರದ ಜನಾರ್ಧನ ಹೊಟೇಲ್‌ನಲ್ಲಿ ತಂಗಿದ್ದ ಡಾ। ಕಾರಂತರನ್ನು ಕಲಾಕ್ಷೇತ್ರಕ್ಕೆ ಕರೆದುಕೊಂಡು ಹೋಗಲು ನನ್ನನ್ನು 4 ಗಂಟೆಗೆ ಬರಲು ಹೇಳಿದ್ದರು. ಅಲ್ಲಿಂದ ಕಲಾಕ್ಷೇತ್ರ ತಲುಪಲು 20 ನಿಮಿಷ ಸಾಕಾಗುತ್ತಿತ್ತು. ಆದರೂ 4 ಗಂಟೆಗೆ ನನ್ನನ್ನು ಬರಲು ಹೇಳಿದ್ದರಿಂದ ನಾನು 3.50ಕ್ಕೆ ಸರಿಯಾಗಿ ಹೊಟೇಲ್ ತಲುಪುವಾಗ ಡಾ। ಕಾರಂತರು ಆಗಲೇ ತಯಾರಾಗಿ ನನಗೋಸ್ಕರ ಕಾಯುತ್ತಿದ್ದರು. ಮೊದಲೇ ಭಯದಲ್ಲಿದ್ದ ನನಗೆ ಮೈಯಲ್ಲಿ ಕರೆಂಟ್ ಶಾಕ್ ಹೊಡೆದ ಹಾಗಾಯ್ತು. ಡಾ। ಕಾರಂತರು ಬಹಳ ಪ್ರಖ್ಯಾತ ಸಾಹಿತಿ, ಮೇರು ವ್ಯಕ್ತಿ, 90ರ ಹರೆಯದವರು. ಆದ್ದರಿಂದ ಭಯ ಸಹಜ. ನನ್ನ ವಾಚ್ ನೋಡಿಕೊಂಡಾಗ ನಾನು ತಡವಾಗಿ ಬರಲಿಲ್ಲ ಎಂಬುದೇ ಸಣ್ಣ ತೃಪ್ತಿ.

ಕಾರಿನಲ್ಲಿ ಹೋಗುವಾಗ ಅವರು ಹೇಳಿದ ಮಾತು–ನಾವು ಇನ್ನೊಬ್ಬರ ಸಮಯವನ್ನು ಗೌರವಿಸಬೇಕು. ನಾವು ತಡವಾಗಿ ಹೋದರೆ ಅವರ ಕೆಲಸಗಳೆಲ್ಲಾ ಹಾಳು, ನಾವು ಮಾಡುವ ಕೆಲಸಗಳಾಗಲೀ, ನಾವು ಮಾತಾಡಬೇಕಿದ್ದ ವಿಷಯಗಳಾಗಲೀ, ಎಲ್ಲವೂ ಹೆಚ್ಚು ಕಡಿಮೆಯಾಗುತ್ತವೆ. ಆದ್ದರಿಂದ ಜೀವನದಲ್ಲಿ ಬಹುಮುಖ್ಯವಾದ ಗುಣವೆಂದರೆ ಸಮಯಪಾಲನೆ ಹಾಗೂ ಶಿಸ್ತು.

ಹಾಗೆಯೇ ಅವರು ಅಂದು ಕೊಟ್ಟ ಎರಡು ಉದಾಹರಣೆಗಳು ಎಂತಹವರನ್ನಾದರೂ ಎಚ್ಚರಿಸುವಂತಿತ್ತು. ಒಮ್ಮೆ ಸರ್. ಎಂ. ವಿಶ್ವೇಶ್ವರಯ್ಯನವರು ಕೇವಲ 3 ನಿಮಿಷ ತಡವಾಗಿ ಬಂದಿದ್ದರಿಂದ ಮಹಾತ್ಮಾ ಗಾಂಧೀಜಿಯವರು ಅವರ ಭೇಟಿಯನ್ನು ನಿರಾಕರಿಸಿ ಮುಂದೆ ನಡೆದಿದ್ದರು. ಇನ್ನೊಮ್ಮೆ ಗಾಂಧೀಜಿಯವರು ಚಿದಂಬರಂನಲ್ಲಿ ಒಂದು ಯೂನಿವರ್ಸಿಟಿಯ ಕಾರ್ಯಕ್ರಮಕ್ಕೆ ಹೋಗುವಾಗ, ಇನ್ನೇನು ನಿಗದಿತ ಸ್ಥಳವನ್ನು ಸೇರಲು 10 ನಿಮಿಷಗಳಿದ್ದಾಗ ಸ್ಥಳೀಯ ಜನರು ಗಾಂಧೀಜಿಯವರಿದ್ದ ಕಾರನ್ನು ಅಡ್ಡಕಟ್ಟಿದರು. ಗಾಂಧೀಜಿಯವರ ಜೊತೆಗಿದ್ದ ರಾಜನ್ ಎಂಬವರು ಜನರನ್ನು ಮಾತಾಡಿಸಲು ಇಳಿದಾಗ ಗಾಂಧೀಜಿಯವರಿಗೆ ಇದು ಯಾಕೋ ಹತೋಟಿಯಿಂದ ತಪ್ಪುತ್ತಿದೆ ಅನ್ನಿಸಿ, ಅವರು ಮೆಲ್ಲಗೆ ಕಾರಿನಿಂದ ಇಳಿದು ಓಡಲಾರಂಭಿಸಿದರು. ಹಿಂದಿನಿಂದ ಬಂದ ಇನ್ನೊಂದು ಕಾರು ಅವರನ್ನು ಹತ್ತಿಸಿಕೊಂಡು ಮುಂದೆ ಸಾಗಿತು. ಹೀಗೆ ಗಾಂಧೀಜಿಯವರು ಸಮಯ ಪಾಲನೆಗೆ ಕೊಡುತ್ತಿದ್ದ ಮಹತ್ವವನ್ನು ಡಾ। ಕಾರಂತರು ವಿವರಿಸಿದ್ದು ಮರೆಯಲಸಾಧ್ಯ.

ನಮ್ಮ ದೇಶದ ಮಾಜಿ ರಾಷ್ಟ್ರಪತಿ ಡಾ। ಅಬ್ದುಲ್ ಕಲಾಂರವರು ಹೇಳುವಂತೆ ಸಮಯಪಾಲನೆ ಅಂದರೆ ಬರೇ ಸಮಯಕ್ಕೆ ಸರಿಯಾಗಿ ಇರುವುದಲ್ಲ, ಮುಖ್ಯವಾಗಿ ಅದು ನಿಮ್ಮ ಸ್ವಂತ ಬದ್ಧತೆಗಳನ್ನು ಗೌರವಿಸುವುದು. ಜೀವನ ಮತ್ತು ಸಮಯವು ಜಗತ್ತಿನ ಅತ್ಯುತ್ತಮ ಶಿಕ್ಷಕರು. ಜೀವನವು ಸಮಯವನ್ನು ಚೆನ್ನಾಗಿ ಬಳಸಿಕೊಳ್ಳುವುದನ್ನು ಕಲಿಸುತ್ತದೆ ಮತ್ತು ಸಮಯವು ಜೀವನದ ಮೌಲ್ಯವನ್ನು ಕಲಿಸುತ್ತದೆ.

**ಎಂ. ಮುರಲೀಧರ ಹೆಗ್ಡೆ**
hegdemm@gmail.com

# ಅಧ್ಯಕ್ಷರ ಮಾತು



ಸದಸ್ಯ ಬಾಂಧವರೆಲ್ಲರಿಗೂ ಗೌರಿ ಗಣೇಶ ಹಬ್ಬದ ಶುಭಾಶಯಗಳು,

ಸಂಘ ಹಾಗೂ ಸಮುದಾಯಕ್ಕೆ ಸೇವೆ ಸಲ್ಲಿಸಿದ ಮಹನೀಯರನ್ನು ಸದಾ ನೆನೆಸಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯ.

ಬೆಂಗಳೂರು ಬಂಟರ ಸಂಘದ ಮಾಜಿ ಅಧ್ಯಕ್ಷರಾಗಿದ್ದ ಕಾಪು ದಿವಾಕರ ಶೆಟ್ಟಿಯವರು ಇತ್ತೀಚೆಗೆ ನಮ್ಮೆಲ್ಲರನ್ನು ಅಗಲಿರುತ್ತಾರೆ. ತಮ್ಮ ಅಧ್ಯಕ್ಷೀಯ ಅವಧಿಯಲ್ಲಿ ಹಲವಾರು ಸಮುದಾಯ ಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಮುದಾಯದ ಸಂಕಷ್ಟಕ್ಕೆ ಸ್ಪಂದಿಸಿದವರು ಹಾಗೂ ಸಂಘದ ಸುವ್ಯವಸ್ಥಿತ ಆಡಳಿತಕ್ಕೆ ಅತ್ಯಗತ್ಯವಿದ್ದ ಆಡಳಿತ ಕಛೇರಿಯ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ದಾನಿಗಳ ನೆರವಿನಿಂದ ಸುಸಜ್ಜಿತ ಆಡಳಿತ ಭವನದ ನಿರ್ಮಾಣ ಕಾರ್ಯ ಕೈಗೊಂಡು ಸಂಘದ ಆಂತರಿಕ ಆಡಳಿತ ವ್ಯವಸ್ಥೆಗೆ ಹೊಸ ರೂಪು-ರೇಷೆ ನೀಡಿದವರು ದಿವಂಗತ ಕಾಪು ದಿವಾಕರ ಶೆಟ್ಟಿಯವರು. ತಮ್ಮ ಅಧಿಕಾರದ ನಂತರದ ದಿನಗಳಲ್ಲಿಯೂ ಸಂಘದೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಸಂಘದ ಆಗು-ಹೋಗುಗಳಲ್ಲಿ ಸಕ್ರಿಯರಾಗಿ ಭಾಗವಹಿಸುತ್ತಿದ್ದರು. ಈ ಬಾರಿ ಕೋವಿಡ್ ಪ್ರಯುಕ್ತ ನಮ್ಮ ಸಮಿತಿಯು ಕೋವಿಡ್ ಸೋಂಕಿತರ ನೆರವಿಗೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಆಕ್ಸಿಜನ್ ಅಭಿಯಾನಕ್ಕೆ ತಮ್ಮ ದೇಣಿಗೆಯನ್ನು ಸಹ ನೀಡಿದ್ದರು. ಕಾಪು ದಿವಾಕರ ಶೆಟ್ಟಿಯವರ ನಿಧನದ ಪ್ರಯುಕ್ತ ನುಡಿನಮನ ಕಾರ್ಯಕ್ರಮವನ್ನು ಕೋವಿಡ್ ನಿಯಮಾವಳಿಗನುಸಾರವಾಗಿ ಆನ್‌ಲೈನ್ ಮೂಲಕ ಸರಳವಾಗಿ ನೆರವೇರಿಸಲಾಗಿತ್ತು.

ಕೋವಿಡ್ ಸೋಂಕು ಸ್ವಲ್ಪ ಮಟ್ಟಿಗೆ ಇಳಿಕೆ ಕಂಡು ವಾಣಿಜ್ಯ ಹಾಗೂ ಶೈಕ್ಷಣಿಕ ಚಟುವಟಿಕೆಗಳು ಹಂತಹಂತವಾಗಿ ಆರಂಭಗೊಳ್ಳುತ್ತಿದೆ. ಸರಿಸುಮಾರು ಒಂದೂವರೆ ವರ್ಷದಿಂದ ಆನ್‌ಲೈನ್ ತರಗತಿಗಳಿಂದ ಬಹಳಷ್ಟು ಸವಾಲುಗಳನ್ನು ಅನುಭವಿಸಿದ ವಿದ್ಯಾರ್ಥಿಗಳು ಹಾಗೂ ಪೋಷಕರು ಸ್ವಲ್ಪ ಮಟ್ಟಿನ ನಿಟ್ಟುಸಿರು ಬಿಡುವಂತಾಗಿದೆ. ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದಲ್ಲೂ ಸರಕಾರದ ನಿಯಮಾನುಸಾರವಾಗಿ 6ನೇ ತರಗತಿಯಿಂದ ಪಿಯುಸಿವರೆಗೆ ಭೌತಿಕ ತರಗತಿಗಳು ಆರಂಭಗೊಂಡಿವೆ.

ಯಲಚಗುಪ್ಪೆ ಸಂಕೀರ್ಣದಲ್ಲಿರುವ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ-2 ವಿದ್ಯಾಸಂಸ್ಥೆಗೆ ಪ್ರಸ್ತುತ ಶೈಕ್ಷಣಿಕ ವರ್ಷಕ್ಕೆ 1 ರಿಂದ 5ನೇ ತರಗತಿಯವರೆಗೆ ಹಾಗೂ ಪ್ರಥಮ ಪಿಯುಸಿಗೆ ನಿರೀಕ್ಷಿತ ಮಟ್ಟದಲ್ಲಿ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದು ಆನ್‌ಲೈನ್ ತರಗತಿಗಳು ಪ್ರಾರಂಭಗೊಂಡಿವೆ. ಸಂಕೀರ್ಣದಲ್ಲಿ ಇತ್ತೀಚೆಗೆ ಸರಸ್ವತಿ ಪೂಜೆ ನೆರವೇರಿಸಿದ್ದು, ಶೀಘ್ರದಲ್ಲಿ ಪ್ರಥಮ ಪಿಯುಸಿಯ ಭೌತಿಕ ತರಗತಿಗಳನ್ನು ಆರಂಭಿಸಲಿದ್ದೇವೆ.

ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಆಡಳಿತ ಮಂಡಳಿಯ ಸಭೆ ಹಾಗೂ ಸರ್ವಸದಸ್ಯರ ಸಭೆಯು ದಿನಾಂಕ 05.09.2021 ರಂದು ಮುಂಬೈ ಬಂಟರ ಸಂಘದಲ್ಲಿ ಜರುಗಿದ್ದು, ಒಕ್ಕೂಟದ ಕಾರ್ಯಚಟುವಟಿಕೆಗಳ ಬಗ್ಗೆ ಕೂಲಂಕುಶವಾಗಿ ಚರ್ಚಿಸಲಾಯಿತು.

ಬೈಂದೂರನ್ನು ಒಂದು ತಾಲೂಕನ್ನಾಗಿ ಮಾಡುವಲ್ಲಿ ಅವಿರತ ಶ್ರಮಿಸಿ ಯಶಸ್ಸನ್ನು ಕಂಡ ಬಂಟ ಸಮುದಾಯದ ದಕ್ಷ ಅರಣ್ಯಾಧಿಕಾರಿ, ಬೈಂದೂರು ಬಂಟರ ಸಂಘದ ಸಂಸ್ಥಾಪಕ ಅಧ್ಯಕ್ಷ ದಿವಂಗತ ಬಂಡಾಡಿ ಜಗನ್ನಾಥ ಶೆಟ್ಟಿ ಐ.ಎಫ್.ಎಸ್. ಇವರ ಸಮುದಾಯ ಸೇವೆಯನ್ನು ನಾವು ಸ್ಮರಿಸಲೇಬೇಕು. ಬೈಂದೂರು ಸಂಘಕ್ಕೆ 25 ವರ್ಷಗಳ ಸುದೀರ್ಘ ಸೇವೆಸಲ್ಲಿಸಿ, ಸಂಘಕ್ಕೆ ತನ್ನ ಸ್ವಂತ ಜಾಗವನ್ನೇ ದಾನವಾಗಿ ನೀಡಿ, ಆ ಜಾಗದಲ್ಲಿ ಒಂದು ಸುಂದರ ಕಟ್ಟಡ ನಿರ್ಮಾಣ ಮಾಡಿ ಸಂಘಕ್ಕೆ ಶಾಶ್ವತ ನೆಲೆ ಕಲ್ಪಿಸಲು ಶ್ರಮಿಸಿದ ಜಗನ್ನಾಥ ಶೆಟ್ಟಿಯವರ ಗೌರವಾರ್ಥ ಸಂಘದ ಸಭಾಭವನಕ್ಕೆ ಅವರ ಹೆಸರನ್ನಿಟ್ಟು ಹಾಗೂ ಅವರ ಪುತ್ಥಳಿಯನ್ನು ಬೈಂದೂರು ಬಂಟರ ಸಂಘದಲ್ಲಿ ಅನಾವರಣಗೊಳಿಸಿರುವುದು, ದಿವಂಗತ ಜಗನ್ನಾಥ ಶೆಟ್ಟಿಯವರ ಅಮೂಲ್ಯ ಸಮುದಾಯ ಸೇವೆಗೆ ಸಂದ ಗೌರವ. ಬೆಂಗಳೂರು ಬಂಟರ ಸಂಘದ ಸಹಯೋಗದಲ್ಲಿ ಶಿರೂರು ಬಂಟರ ಸಂಘ ಮತ್ತು ಬೈಂದೂರು ಬಂಟರ ಸಂಘದಲ್ಲಿ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಿಸಲಾಯಿತು.

ಸಂಘದ ವರಸಿದ್ಧಿ ವಿನಾಯಕ ಮಂದಿರದಲ್ಲಿ ಈ ಬಾರಿಯ ಗಣೇಶ ಚತುರ್ಥಿಯನ್ನು ಕೋವಿಡ್ ನಿಯಮಾವಳಿಗನುಸಾರವಾಗಿ ಸರಳವಾಗಿ ಆಚರಿಸಲಿದ್ದೇವೆ.

ವಂದನೆಗಳೊಂದಿಗೆ,

**ಆರ್. ಉಪೇಂದ್ರ ಶೆಟ್ಟಿ**
ಅಧ್ಯಕ್ಷರು

# ಗೌರವ ಕಾರ್ಯದರ್ಶಿಗಳ ವರದಿ



ಎಲ್ಲರಿಗೂ ಗೌರಿ ಗಣೇಶ ಹಬ್ಬದ ಶುಭಾಶಯಗಳು. ಸಂಘದ ಚಟುವಟಿಕೆಗಳು ನಿಧಾನಗತಿಯಲ್ಲಿ ಸಾಗುತ್ತಿವೆ. ಮದುವೆ-ಸಭೆ-ಸಮಾರಂಭಗಳು ಸರ್ಕಾರದ ಆದೇಶವನ್ನು ಪಾಲಿಸಿಕೊಂಡು ಸಾರ್ವಜನಿಕರು ಕಾರ್ಯಕ್ರಮವನ್ನು ಸಭಾಭವನದಲ್ಲಿ ಮಾಡುತ್ತಿರುವುದು ಸಂತಸದ ಸಂಗತಿ. ಕೋವಿಡ್ ನಿಯಂತ್ರಣಕ್ಕೆ ಬಂದಿದ್ದೆ ಹೌದಾದಲ್ಲಿ ಇನ್ನು ಕೆಲವೇ ತಿಂಗಳುಗಳಲ್ಲಿ ಸಂಘದ ಆರ್ಥಿಕತೆ ಸುಧಾರಿಸಬಹುದು ಎನ್ನುವುದು ನಮ್ಮ ನಂಬಿಕೆ.

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ – I ಮತ್ತು II ನಲ್ಲಿ ಸ್ವಾತಂತ್ರ್ಯೋತ್ಸವವನ್ನು ಧ್ವಜಾರೋಹಣ ಮಾಡುವ ಮೂಲಕ ಆಚರಿಸಲಾಯಿತು.

ದಿನಾಂಕ 11.08.2021ರಂದು ನಿಧನರಾದ ನಮ್ಮ ಸಂಘದ ಮಾಜಿ ಅಧ್ಯಕ್ಷರೂ, ವಿಜಯಾ ಬ್ಯಾಂಕ್‌ನ ನಿವೃತ್ತ ಡಿ.ಜಿ.ಎಂ. ಶ್ರೀ ಕಾಪು ದಿವಾಕರ ಶೆಟ್ಟಿಯವರ ನುಡಿನಮನ ಕಾರ್ಯಕ್ರಮವನ್ನು ದಿನಾಂಕ 16.08.2021ರಂದು ಸಂಘದ ಸೆಮಿನಾರ್ ಹಾಲ್‌ನಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮವನ್ನು ಆನ್‌ಲೈನ್ ಮೂಲಕ ನೇರಪ್ರಸಾರವನ್ನು ಮಾಡಿಲಾಗಿದ್ದು, ಸಂಘದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಮಾಜಿ ಅಧ್ಯಕ್ಷರುಗಳು, ಮಾಜಿ ಗೌರವ ಕಾರ್ಯದರ್ಶಿಗಳು ಹಾಗೂ ಸದಸ್ಯರು ನುಡಿನಮನವನ್ನು ಸಲ್ಲಿಸಿದರು.

ಇತ್ತೀಚೆಗೆ ನಮ್ಮ ಸಂಘದ ವಿದ್ಯಾರ್ಥಿವೇತನ ಸಮಿತಿಯ ವತಿಯಿಂದ ಬೈಂದೂರು ಮತ್ತು ಶಿರೂರು ಬಂಟರ ಸಂಘಗಳ ಆಯೋಜನೆಯಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ನೀಡಲಾಯಿತು. ಕೋವಿಡ್‌ನಂತಹ ಇಂತಹ ಸಂದರ್ಭದಲ್ಲಿ ಮಕ್ಕಳ ಪೋಷಕರಿಗೆ ಇದರಿಂದ ತುಂಬಾ ಸಹಾಯವಾಯಿತು ಎನ್ನುವ ಮಾತು ಪೋಷಕರಿಂದ ವ್ಯಕ್ತವಾಯಿತು.

ಸರ್ಕಾರ ಮತ್ತು ಶಿಕ್ಷಣ ಇಲಾಖೆಯ ನಿರ್ದೇಶನದಂತೆ ತರಗತಿಗಳು ಪ್ರಾರಂಭವಾಗಿದ್ದು, ಅದಕ್ಕೆ ಬೇಕಾದ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಿ ಶಿಕ್ಷಕರು ಬೋಧನೆ ನೀಡುತ್ತಿದ್ದಾರೆ. ದಿನೇ ದಿನೇ ಶಾಲೆಗೆ ಬರುವ ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚಾಗುತ್ತಿದೆ.

ಯಲಚಗುಪ್ಪೆಯಲ್ಲಿ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ಶಾಲೆಯ ಕಾಮಗಾರಿಯು ಬಹುತೇಕ ಮುಗಿದಿದೆ. ಸಂತೋಷದ ವಿಚಾರವೆಂದರೆ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಪ್ರವೇಶಾತಿ ನಾವು ನಿರೀಕ್ಷಿಸಿದ ಮಟ್ಟಕ್ಕಿಂತಲೂ ಮೀರಿರುವುದು ಭವಿಷ್ಯಕ್ಕೆ ಉತ್ತಮ ಸಂಕೇತವಾಗಿರುತ್ತದೆ. ಸೆಪ್ಟಂಬರ್ 1ನೇ ತಾರೀಕಿನಂದು ಹೊಸ ಶಾಲೆಯಲ್ಲಿ ಸರಸ್ವತಿ ಪೂಜೆಯನ್ನು ಮಾಡುವುದರ ಮೂಲಕ ಆನ್‌ಲೈನ್ ಮತ್ತು ಆಫ್‌ಲೈನ್ ತರಗತಿಗಳಿಗೆ ಚಾಲನೆಯನ್ನು ನೀಡಲಾಯಿತು. ಕೋವಿಡ್ ನಿಯಮಾವಳಿಯನ್ನು ಪಾಲಿಸಿದ ನಂತರ ಶಾಲೆಯ ಉದ್ಘಾಟನೆ ನಡೆಯಲಿದೆ.

ವಂದನೆಗಳೊಂದಿಗೆ,

**ಮಧುಕರ ಎಂ. ಶೆಟ್ಟಿ**
ಗೌರವ ಕಾರ್ಯದರ್ಶಿ

**ಸಂಘವು ನಡೆಸಬೇಕಾಗಿದ್ದ ಆಡಳಿತ ಮಂಡಳಿಯ ಆಯ್ಕೆ ಚುನಾವಣೆಯು ಸರಕಾರದ ಕೋವಿಡ್ ನಿಯಮಾವಳಿಯಿಂದ ಮುಂದೂಡಲಾಗಿದೆ.**

# ಡಾ। ಹೆಚ್.ಎಸ್. ಬಲ್ಲಾಳರ ಉದ್ಯೋಗ ಪರ್ವದ ಸುವರ್ಣ ಸಂಭ್ರಮ



ಭುವನ ಪ್ರಸಾದ ಶೆಟ್ಟಿ

ಆರಡಿ ಎತ್ತರದ ಅಜಾನುಬಾಹು, ನೀಳಕಾಯ, ನೇರ ನಡೆನುಡಿ, ಗಂಭೀರ ಮುಖ ಮುದ್ರೆಯ ಹಿಂದೆ ಮಾರ್ದವ ಹೃದಯ, ನಿರರ್ಗಳವಾಗಿ ಹರಿಯುವ ವಿದ್ವತ್ ಪೂರ್ಣ ಮಾತಿನ ಸರಣಿ, ಅಲ್ಲಲ್ಲಿ ಹಾಸ್ಯದ ತುಣುಕು. ಕೇಳುಗರಿಗೆ ಮತ್ತೆ ಮತ್ತೆ ಕೇಳಬೇಕೆಂಬ ಭಾವ. ಎಲ್ಲರ ಮಾತುಗಳನ್ನು ಆಲಿಸುವ ವ್ಯವಧಾನ. ವಿಶಾಲ ಮನೋಭಾವ. ಇವರೇ, ಇದೀಗ 50 ವರ್ಷಗಳ ಕಾಲ ಒಂದೇ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸಿ ಕೃತಕೃತ್ಯರಾದ ಮಣಿಪಾಲ ವಿಶ್ವ ವಿದ್ಯಾನಿಲಯದ ಸಹಕುಲಾಧಿಪತಿ ಹೆಬ್ರಿ ಬೀಡು ಡಾ। ಸುಭಾಷ್ ಕೃಷ್ಣ ಬಲ್ಲಾಳರು. ಅವರ ಅಜ್ಜ ಸ್ವಾತಂತ್ರ್ಯ ಹೋರಾಟಗಾರ ಬೇಳಂಜೆ ಕೃಷ್ಣಯ್ಯ ಹೆಗ್ಡೆ.

ಈ ನಾಡಿನ ಪ್ರಸಿದ್ಧ ಬಂಟ ಮನೆತನಗಳಾದ ಹೆಬ್ರಿ ಬೀಡಿನ ಶ್ರೀಮತಿ ಪ್ರಫುಲ್ಲಾ ಹೆಗ್ಡೆ ಮತ್ತು ಬೇಳಂಜೆ ಸಂಜೀವ ಹೆಗ್ಡೆಯವರ ಐವರು ಪುತ್ರರಲ್ಲಿ ಹಿರಿಯವರು ಡಾ। ಸುಭಾಸ್ ಕೃಷ್ಣ ಬಲ್ಲಾಳರು. ಎಲ್ಲ ಸಹೋದರರರೂ ವೈದ್ಯರು. ಅಜ್ಜ ಕೃಷ್ಣಯ್ಯ ಹೆಗ್ಡೆಯವರು ವಿಜಯಾ ಬ್ಯಾಂಕಿನ ಸ್ಥಾಪಕ ನಿರ್ದೇಶಕರಾಗಿದ್ದರು. ತಂದೆ ಸಂಜೀವ ಹೆಗ್ಡೆಯವರು ಉಡುಪಿಯ ವಿ.ಜೆ.ಯು ಕ್ಲಬ್ಬಿನ ಅಧ್ಯಕ್ಷರೂ, ಹನುಮಾನ್ ಮತ್ತು ಗಜಾನನ ಸಾರಿಗೆ ಸಂಸ್ಥೆಗಳ ನಿರ್ದೇಶಕರೂ ಆಗಿದ್ದರು. ಹೀಗೆ ಬಾಲ್ಯದಿಂದಲೇ ನಾಯಕತ್ವದ ಗುಣಗಳು ಡಾ। ಬಲ್ಲಾಳರಲ್ಲಿ ಮೈಗೂಡಿಕೊಂಡಿದ್ದುವು. ಮಣಿಪಾಲದಲ್ಲಿ ಮೆಡಿಕಲ್ ಕಾಲೇಜ್ ನಿರ್ಮಾಣದ ಸಂದರ್ಭದಲ್ಲಿ ಡಾ। ಟಿ.ಎಂ.ಎ ಪೈಯವರ ಆಶಯದಂತೆ ಶ್ರಮದಾನದಲ್ಲಿ ಭಾಗವಹಿಸಿದ ನೆನಪು ಆಗಿನ ವಿದ್ಯಾರ್ಥಿ ಹೆಚ್. ಎಸ್. ಬಲ್ಲಾಳರಲ್ಲಿ ಇನ್ನೂ ಹಸಿರಾಗಿದೆ.

ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಮಾಧ್ಯಮಿಕ, ಮಹಾತ್ಮ ಗಾಂಧಿ ಸ್ಮಾರಕ ಕಾಲೇಜಿನಲ್ಲಿ ಪಿಯುಸಿ, ಮೈಸೂರಿನ ವೈದ್ಯಕೀಯ ಕಾಲೇಜಿನಿಂದ ವೈದ್ಯಕೀಯ ಪದವಿ, ಬೆಂಗಳೂರಿನ ವೈದ್ಯಕೀಯ ಕಾಲೇಜಿನಿಂದ ರೇಡಿಯಾಲಜಿಯಲ್ಲಿ ಸ್ನಾತಕೋತ್ತರ ಪದವಿ ಪಡೆದು ಮುಂದೆ ಅಮೇರಿಕದ ಮುಸ್ಸೋರಿಯಲ್ಲಿರುವ ಸೈಂಟ್ ಲೂವಿಸ್ ವಿಶ್ವವಿದ್ಯಾನಿಲಯದಲ್ಲಿ ಆಲ್ಟ್ರಾ ಸೌಂಡ್ ಮತ್ತು ಸಿ.ಟಿ ಸ್ಕ್ಯಾನ್ ವಿಸ್ತೃತ ಜ್ಞಾನ ಗಳಿಸಿದರು.

ತಮ್ಮ ಕಾಲೇಜಿನ ದಿನಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಟೆನ್ನಿಸ್ ತಂಡದ ನಾಯಕರಾಗಿದ್ದರು. 80ರ ಹರೆಯದ ಅವರನ್ನು ಈಗಲೂ ಟೆನ್ನಿಸ್ ಆಡುವುದನ್ನು ಕಾಣಬಹುದು.

1971ರಲ್ಲಿ ಮಂಗಳೂರಿನ ಕಸ್ತೂರ್ಬಾ ವೈದ್ಯಕೀಯ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ವೃತ್ತಿ ಜೀವನ ಆರಂಭಿಸಿ, ಮುಂದೆ ವಿಭಾಗ ಮುಖ್ಯಸ್ಥರಾಗಿ, ಅಸೊಸಿಯೇಟ್ ಡೀನ್ ಮತ್ತು ಡೀನ್ ಆಗಿ ಪದೋನ್ನತಿ ಪಡೆದು ನಂತರ ಅಂತಾರಾಷ್ಟ್ರೀಯ ಖ್ಯಾತಿಯ, ಪ್ರತಿಷ್ಠಿತ ಮಣಿಪಾಲ ವಿಶ್ವವಿದ್ಯಾನಿಲಯದ ಉಪಕುಲಪತಿಯಾಗಿ 2003ರಲ್ಲಿ ಅಧಿಕಾರ ಸ್ವೀಕರಿಸಿದರು.



2007ರಲ್ಲಿ ಮಣಿಪಾಲ ವಿಶ್ವವಿದ್ಯಾನಿಲಯದ ಪ್ರಥಮ ಸಹಕುಲಾಧಿಪತಿಯಾಗಿ ಪದೋನ್ನತಿ ಪಡೆದಿರುವುದು ಅವರ ಬದ್ಧತೆ ಮತ್ತು ಕರ್ತವ್ಯ ನಿಷ್ಠೆಗೆ ಸಾಕ್ಷಿ. ಹೀಗೆ ಒಂದೇ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ಮುಂದೆ ಆಡಳಿತಗಾರನಾಗಿ ಅವಿಚ್ಛಿನ್ನವಾಗಿ 50 ವರ್ಷ ಕರ್ತವ್ಯ ನಿರ್ವಹಿಸಿ ಉನ್ನತ ಸ್ಥಾನಕ್ಕೆ ಏರಿರುವುದು ಅಂತಾರಾಷ್ಟ್ರೀಯ ದಾಖಲೆ ಆಗಬಹುದು. 300ಕ್ಕೂ ಹೆಚ್ಚು ವಿಷಯಗಳಲ್ಲಿ ಡಿಪ್ಲೋಮಾ, ಸ್ನಾತಕ, ಸ್ನಾತಕೋತ್ತರ ಮತ್ತು ಪಿ.ಹೆಚ್.ಡಿ ಪದವಿ ನೀಡುವ ಬೃಹತ್ ಸಂಸ್ಥೆಯನ್ನು ಡಾ। ಬಲ್ಲಾಳರು ಮುನ್ನಡೆಸುತ್ತಿದ್ದಾರೆ. ಸುಮಾರು 18 ವರ್ಷಗಳಿಂದ ಮಣಿಪಾಲ ವಿಶ್ವವಿದ್ಯಾನಿಲಯದ ಮುಖ್ಯಸ್ಥರಾಗಿ ಅದನ್ನು ಭಾರತದ ಹತ್ತು ಸರ್ವಶ್ರೇಷ್ಠ ವಿಶ್ವವಿದ್ಯಾನಿಲಯಗಳಲ್ಲಿ ಒಂದು ಎಂಬ ಮಾನ್ಯತೆಗೆ ಪಾತ್ರವಾಗುವಂತೆ ಬೆಳೆಸಿದ್ದಾರೆ. ಈ ಎಲ್ಲಾ ಸಾಧನೆಗಳಿಗೆ ಮುಕುಟ ಪ್ರಾಯವಾಗಿ 2017ರಲ್ಲಿ ಭಾರತ ಸರ್ಕಾರದಿಂದ 'ಇನ್ಸ್‌ಟಿಟ್ಯೂಟ್ ಆಫ್ ಎಮಿನೆನ್ಸ್' ಎಂಬ ಪ್ರತಿಷ್ಠಿತ ಗೌರವಕ್ಕೆ ಪಾತ್ರವಾದ ಬೆರಳೆಣಿಕೆಯ ಸಂಸ್ಥೆಗಳಲ್ಲಿ ಬಲ್ಲಾಳರ ನೇತೃತ್ವದ ಮಣಿಪಾಲ ವಿಶ್ವವಿದ್ಯಾನಿಲಯವೂ ಒಂದು.

ಅವರು ಭಾರತೀಯ ವೈದ್ಯಕೀಯ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಅಧ್ಯಕ್ಷರಾಗಿದ್ದರು. ಎಫ್.ಐ.ಸಿ.ಸಿ.ಐ. ಯ ಉನ್ನತ ಶಿಕ್ಷಣ ಸಮಿತಿಯ ಅಧ್ಯಕ್ಷರೂ ಭಾರತೀಯ ವೈದ್ಯಕೀಯ ಮಂಡಳಿ ಮತ್ತು ಜೆ.ಎಸ್.ಎಸ್. ವಿಶ್ವವಿದ್ಯಾನಿಲಯದ ಆಡಳಿತ ಮಂಡಳಿಯ ಸದಸ್ಯರೂ ಆಗಿದ್ದರು. ರಾಷ್ಟ್ರಪತಿಯವರಿಂದ ನಾಮ ನಿರ್ದೇಶಿಸಲ್ಪಟ್ಟು ಅಸ್ಸಾಂ ವಿಶ್ವವಿದ್ಯಾನಿಲಯದ ಆಡಳಿತ ಮಂಡಳಿಯ ಸದಸ್ಯರಾಗಿದ್ದಾರೆ. ಆರೋಗ್ಯ, ವೈದ್ಯಕೀಯ ಮತ್ತು ಶಿಕ್ಷಣ ಕ್ಷೇತ್ರಗಳ ಸಂಪನ್ಮೂಲ ವ್ಯಕ್ತಿಯಾಗಿರುವ ಅವರು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಮ್ಮೇಳನಗಳಲ್ಲಿ ನೂರಕ್ಕೂ ಹೆಚ್ಚು ಶಿಖರೋಪನ್ಯಾಸಗಳನ್ನು ನೀಡಿದ್ದಾರೆ. ಕಾಣಿಯೂರು ಮಠದ ಪರ್ಯಾಯ ಪ್ರಶಸ್ತಿ, 2008ನೇ ಇಸವಿಯ ಹೊಸ ವರ್ಷದ ಪ್ರಶಸ್ತಿ ಮತ್ತು ವಿಶ್ವ ಬಂಟರ ಸಂಘಗಳ ಒಕ್ಕೂಟದ ಪ್ರಶಸ್ತಿಗೂ ಅವರು ಭಾಜನರಾಗಿದ್ದಾರೆ. ಅಖಿಲ ಭಾರತ ರೇಡಿಯಾಲಜಿ ಮತ್ತು ಇಮೇಜಿಂಗ್ ಸಂಸ್ಥೆಯ ಅಧ್ಯಕ್ಷರಾಗಿ ಮಣಿಪಾಲದಲ್ಲಿ

ರಾಷ್ಟ್ರ ಮಟ್ಟದ ಸಮ್ಮೇಳನವನ್ನು ಆಯೋಜಿಸಿದ್ದಾರೆ. ಮಾನವ ದೇಹದ ರಚನೆಯ ಕುರಿತಾದ 'ಪೀಪಿಂಗ್ ಇನ್‌ಸೈಡ್ ದಿ ಬಾಡಿ' ಮತ್ತು ಮಕ್ಕಳ ಕ್ಯಾನ್ಸರ್ ರೋಗದ ಬಗ್ಗೆ 'ಚೈಲ್ಡ್‌ಹುಡ್ ಕ್ಯಾನ್ಸರ್' ಎಂಬ ಪುಸ್ತಕಗಳನ್ನು ಬರೆದಿದ್ದಾರೆ.

ಅವರ ಕಾರ್ಯಕ್ಷಮತೆಯಿಂದ ಐ.ಬಿ.ಎಂ. ವರ್ಷದ ಸ್ಫೂರ್ತಿಯುತ ಉಪಕುಲಪತಿ ಪ್ರಶಸ್ತಿ, ಆರ್ಯಭಟ ಅಂತಾರಾಷ್ಟ್ರೀಯ ಪ್ರಶಸ್ತಿ, ಬೆಂಗಳೂರು ಮೆಡಿಕಲ್ ಕಾಲೇಜಿನ ಪ್ರಾಕ್ತನ ವಿದ್ಯಾರ್ಥಿ ಸಂಘದಿಂದ ಅತ್ಯುತ್ತಮ ವೈದ್ಯಕೀಯ ಪ್ರಾಧ್ಯಾಪಕ ಪ್ರಶಸ್ತಿ, ಪ್ರತಿಷ್ಠಿತ ಮೂಲ್ಕಿ ಸುಂದರರಾಮ್ ಶೆಟ್ಟಿ ಪ್ರಶಸ್ತಿಗಳಿಗೆ ಅವರು ಭಾಜನರಾಗಿದ್ದಾರೆ. ಕರ್ನಾಟಕ ಸರ್ಕಾರ 2016ರ ರಾಜ್ಯೋತ್ಸವ ಪ್ರಶಸ್ತಿ ನೀಡಿ ಅದರ ಗೌರವವನ್ನು ಹೆಚ್ಚಿಸಿಕೊಂಡಿದೆ. ಅವರ ಕಾರ್ಯಸಾಧನೆಗಳನ್ನು ದಾಖಲಿಸಿ ಮಣಿಪಾಲ ವಿಶ್ವವಿದ್ಯಾನಿಲಯ 'Dr. H S Ballal - Manipal's Gentle Giant' ಎಂಬ ಅಭಿನಂದನಾ ಗ್ರಂಥವನ್ನು ಪ್ರಕಟಿಸಿದೆ. ಯಕ್ಷಗಾನ ಕಲೆಯ ತುಂಬು ಅಭಿಮಾನಿಯಾದ ಅವರು ಸದಾ ಯಕ್ಷ ಕಲಾವಿದರಿಗೆ ಸಹಾಯ ಮಾಡುತ್ತಿದ್ದಾರೆ. ತಮ್ಮ ತಂದೆ ಬೇಳಂಜೆ ಸಂಜೀವ ಹೆಗ್ಡೆಯವರ ಹೆಸರಿನ ಟ್ರಸ್ಟ್ ಮೂಲಕ ವೈದ್ಯಕೀಯ ಸೇವೆಗಳನ್ನು ಗ್ರಾಮೀಣ ಪ್ರದೇಶದ ಜನರಿಗೆ ವಿಸ್ತರಿಸಿದ್ದಾರೆ. ತಮ್ಮ ಎಲ್ಲಾ ಕಾರ್ಯ ಬಾಹುಳ್ಯಗಳ ಒತ್ತಡದ ಮಧ್ಯೆಯೂ ಅವರು ಕುಟುಂಬ ವತ್ಸಲರಾಗಿ ತಮ್ಮ ತಾಯಿ ತಂದೆಯ ಕುಟುಂಬಿಕರನ್ನು ಸಂಘಟಿಸಿ ಹೆಬ್ರಿ ಬೇಳಂಜೆ ಕುಟುಂಬ ಸಮಾವೇಶವನ್ನು ಬಹಳ ಅಚ್ಚುಕಟ್ಟಾಗಿ ನಡೆಸಿದ್ದಾರೆ.

ಅವರ 18 ವರ್ಷಗಳ ಹೊಣೆಗಾರಿಕೆಯ ಸಂದರ್ಭದಲ್ಲಿ ಮಣಿಪಾಲ ವಿಶ್ವವಿದ್ಯಾನಿಲಯವು ಹಲವು ಮೈಲಿಗಲ್ಲುಗಳನ್ನು ಸ್ಥಾಪಿಸಿದೆ. ತನ್ನ ಆಡಳಿತ ಕಛೇರಿಗೆ ಜಾಗತಿಕ ಮಟ್ಟದ ಸೌಲಭ್ಯಗಳಿರುವ ಕಟ್ಟಡವನ್ನು ನಿರ್ಮಿಸಿದೆ. ನೆಲಮಟ್ಟದಲ್ಲಿ ಐದನೇ ಮಹಡಿ ಇರುವ ಕಟ್ಟಡ ನಿರ್ಮಾಣ ಕೌಶಲ್ಯಕ್ಕೆ ಸಾಕ್ಷಿಯಾಗಬಲ್ಲ ಕ್ರೀಡಾ ಸಂಕೀರ್ಣ ಮರೀನಾ ತಲೆಯೆತ್ತಿ ನಿಂತಿದೆ. ನೆನೆಗುದಿಗೆ ಬಿದ್ದಿದ್ದ ಎಂಡ್ ಪಾಯಿಂಟ್‌ನ ವಿಶಾಲ ಸ್ಥಳದಲ್ಲಿ ಹೂವಿನ ತೋಟ ಮತ್ತು ಕ್ರಿಕೆಟ್ ಹಾಗೂ ಹಾಕಿ ಕ್ರೀಡಾಂಗಣಗಳು ನಿರ್ಮಿಸಲ್ಪಟ್ಟಿವೆ. ಮಂಗಳೂರಿನ ಅಂಬೇಡ್ಕರ್ ವೃತ್ತದಲ್ಲಿ ಹೊಸ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಾರ್ಯಾರಂಭಿಸಿದೆ. ಕೋವಿಡ್ ಸಂಕಷ್ಟದ ಕಾಲದಲ್ಲಿ ತೀವ್ರ ಬೆಡ್ ಕೊರತೆ ಉಂಟಾದಾಗ ಉಡುಪಿಯ ಡಾ। ಟಿ.ಎಂ. ಪೈ ಆಸ್ಪತ್ರೆಯನ್ನು ಕೋವಿಡ್ ಚಿಕಿತ್ಸೆಗೆ ಮೀಸಲಿರಿಸಿ ಮಾನವೀಯತೆಯನ್ನು ಮೆರೆದಿದ್ದಾರೆ. ಹಸುರೀಕರಣದ ತಮ್ಮ ಸಾಧನೆಗಳಿಂದ ವಿಶ್ವ ವಿದ್ಯಾನಿಲಯದ ಆವರಣ 'ಗ್ರೀನ್ ಕ್ಯಾಂಪಸ್' ಎಂದು ಘೋಷಿಸಲ್ಪಟ್ಟಿದೆ. ಎಂ.ಐ.ಟಿ.ಯಲ್ಲಿ ಇನ್ನೋವೇಶನ್ ಸೆಂಟರ್ ಎಂಬ ಯುವ ಇಂಜಿನಿಯರ್‌ಗಳನ್ನು ತರಬೇತುಗೊಳಿಸುವ ಹೊಸ ಸಂಸ್ಥೆ ಸ್ಥಾಪಿತವಾಗಿದೆ. ಆರ್ಕಿಟೆಕ್ಚರ್ ವಿಭಾಗಕ್ಕೆ ಪ್ರತ್ಯೇಕ ಸ್ಕೂಲ್ ಆಫ್ ಆರ್ಕಿಟೆಕ್ಚರ್ ರೂಪುಗೊಂಡಿದೆ.

ಡಾ। ಟಿ.ಎಂ.ಎ. ಪೈಯವರಿಂದ ಸ್ಥಾಪಿಸಲ್ಪಟ್ಟ ಅಕಾಡೆಮಿ ಆಫ್ ಜನರಲ್ ಎಜ್ಯುಕೇಷನ್ ಮಣಿಪಾಲದ ಅಧ್ಯಕ್ಷ ಮತ್ತು ಕಾರ್ಯದರ್ಶಿಯಾಗಿಯೂ ಆಗಿ ಡಾ। ಬಲ್ಲಾಳರು ಆಡಳಿತ ನಡೆಸುತ್ತಿದ್ದಾರೆ. 1959ರಲ್ಲಿ ಎಂ.ಜಿ.ಎಂ. ಕಾಲೇಜಿನ ವಿದ್ಯಾರ್ಥಿಯಾಗಿದ್ದ ಅವರು ಇದೀಗ ಅದರ ಆಡಳಿತ ಮಂಡಳಿಯ ಅಧ್ಯಕ್ಷರಾಗಿರುವುದು ಅಪೂರ್ವ ಸುಯೋಗ. ಅಕಾಡೆಮಿಯ ಎಲ್ಲಾ ವಿದ್ಯಾ ಸಂಸ್ಥೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಈ ಎಲ್ಲಾ ಪ್ರಗತಿಪರ ಸಾಧನೆಗಳ ಹಿಂದೆ ಬಲ್ಲಾಳರ ಸ್ಫೂರ್ತಿ, ಮಾರ್ಗದರ್ಶನ ಮತ್ತು ಚಿಂತನೆಗಳಿವೆ.

ಡಾ। ಮಾಧವ ಪೈಯವರ ದೂರದರ್ಶಿತ್ವ ಡಾ। ರಾಮದಾಸ್ ಎಂ. ಪೈ ಮತ್ತು ಡಾ। ರಂಜನ್ ಆರ್. ಪೈಯವರ ಮಾರ್ಗದರ್ಶನ ಸ್ಮರಣೀಯ, ಅಂತೆಯೇ ಎಲ್ಲಾ ವೈದ್ಯಕೀಯ ಬೋಧಕ, ಬೋಧಕೇತರ ಮತ್ತು ಸರ್ವ ಸಿಬ್ಬಂದಿಗಳ ಸಹಕಾರದಿಂದ ಈ ಸಾಧನೆ ಸಾಧ್ಯವಾಯಿತೆಂದು ಡಾ। ಬಲ್ಲಾಳರು ತಮ್ಮ ಪ್ರಾಂಜಲ ಮನಸ್ಸನ್ನು ತೆರೆದಿಡುತ್ತಾರೆ. ಸುಮಾರು 2 ವರ್ಷಗಳಿಂದ ಆಸ್ಪತ್ರೆಗಳು, ವಿದ್ಯಾಸಂಸ್ಥೆಗಳು, ಮುಚ್ಚಿದ್ದರೂ ಎಲ್ಲಾ ಸಿಬ್ಬಂದಿ ವರ್ಗದವರಿಗೂ ಪೂರ್ಣ ಪ್ರಮಾಣದ ವೇತನ ಮತ್ತು ಸೌಲಭ್ಯಗಳನ್ನು ನೀಡಿರುವುದು ಅವರ ಮಾನವೀಯ ಸ್ಪಂದನೆಗೆ ಸಾಕ್ಷಿ.

ಪತ್ನಿ ಇಂದಿರಾ ಎಸ್. ಬಲ್ಲಾಳರು ತಂಜಾವೂರು ಶೈಲಿಯ ವರ್ಣಚಿತ್ರ ಕಲಾವಿದೆ. ತಮ್ಮ ಸಾಧನೆಗಳಿಗೆ ಪತ್ನಿಯ ಪೂರ್ಣ ಸಹಕಾರವಿದೆ ಎಂದು ಡಾ। ಬಲ್ಲಾಳರು ಮನದುಂಬಿ ಹೇಳುತ್ತಾರೆ. ಆದ್ದರಿಂದಲೇ ಅವರು "Good Worker, and a Good Husband". ಪುತ್ರ ಡಾ। ಸಂದೀಪ್ ಬಲ್ಲಾಳ್ ತಂದೆಯಂತೆ ರೇಡಿಯಾಲಜಿಯಲ್ಲಿ ಸ್ನಾತಕೋತ್ತರ ಪದವಿ ಪಡೆದು ಬೆಂಗಳೂರಿನಲ್ಲಿ ಕ್ಲಿನಿಕ್ ನಡೆಸುತ್ತಿದ್ದಾರೆ. ಪತ್ನಿ ರಶ್ಮಿ ಬಲ್ಲಾಳ್, ಪುತ್ರಿ ಸುಪ್ರೀಯಾ ಎನ್. ಶೆಟ್ಟಿ ಬಿ.ಬಿ.ಎಂ. ಪದವೀಧರೆ, ತನ್ನ ಪತಿ ನೇತ್ರ ತಜ್ಞ ಡಾ। ನಿತಿನ್ ಶೆಟ್ಟಿಯವರೊಂದಿಗೆ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

ಇಂಥಹ ಅಪೂರ್ವ ವ್ಯಕ್ತಿತ್ವವನ್ನು ಮುಂದೊಂದು ದಿನ ನಿರೀಕ್ಷಿಸಿ ಸರ್ವಜ್ಞ ಕವಿ ಬರೆದ 'ಬೆಚ್ಚನಾ ಮನೆಯಿರಲು, ವೆಚ್ಚಕ್ಕೆ ಹೊನ್ನಿರಲು, ಇಚ್ಚೆಯನರಿವ ಸತಿಯಿರಲು, ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ' ಎಂಬ ಪದ್ಯ ಡಾ। ಬಲ್ಲಾಳರಿಗೆ ಪೂರ್ತಿ ಅನ್ವಯವಾಗುತ್ತದೆ.

ಹೆಕ್ಕಿದ್ದು ಮುತ್ತು, ಉಳಿದದ್ದು ಸಾಗರ. 'ಗಗನಂ ಗಗನಾಕಾರಂ, ಸಾಗರಂ ಸಾಗರೋಪಮಂ'. ಬಲ್ಲಾಳರಿಗೆ ಅವರೇ ಸರಿಸಮಾನರು. ತಮ್ಮ 50 ವರ್ಷಗಳ ಸ್ವಚ್ಛ ಆಡಳಿತ ಮತ್ತು ಅಪೂರ್ವ ಸಾಧನೆಗಳೊಂದಿಗೆ ಡಾ। ಬಲ್ಲಾಳರು ಆದರ್ಶಪ್ರಾಯರಾಗಿದ್ದಾರೆ.

# ದೇವರ ಕೃಪೆಯಿಂದ ನಾನು ಇವತ್ತು ಈ ಕ್ಷಣವನ್ನು ಜೀವಿಸುತ್ತಿದ್ದೇನೆ

ಬರಹದ ಟೈಟಲ್ ನೋಡಿ ಈತರ ಬರೆಯುತ್ತಿದ್ದೇನೆ ಎಂದು ಆಶ್ಚರ್ಯವಾಗಿರಬೇಕು!!! ಅಲ್ವಾ.

ಜೀವನದಲ್ಲಿ ಸಾವಿನ ಬಗ್ಗೆ ಭಯವಿರುವುದು ಸಹಜವಾಗಿ ಎಲ್ಲ ಜೀವಿಯ ಗುಣ, ಆದರೆ ಇಂದಿನ ಪರಿಸ್ಥಿತಿಯಲ್ಲಿ ಪ್ರತಿನಿತ್ಯ ಸಾವಿನ ಭಯ ಪಟ್ಟುಕೊಂಡು ಬದುಕುತ್ತಿರುವ ಜೀವಿಗಳು ನಾವೆಲ್ಲ ಎಂದು ಹೇಳಿದರು ತಪ್ಪಾಗಲಾರದು!! ಇಂದು ನನ್ನಲ್ಲಿ "ಕೊರೋನವೆಂಬ ಮಹಾಮಾರಿ"ಯಿಂದ ಹಲವಾರು ಪ್ರಶ್ನೆಗಳು ಉದ್ಭವವಾದವು. ಗೊಂದಲಗಳು ಉಂಟಾದವು. ಎಷ್ಟೋ ಮನುಷ್ಯರ ಭವಿಷ್ಯವಾಣಿಗಳೆಲ್ಲವೂ ಏನಾದವೂ!? ಎಂಬ ಪ್ರಶ್ನೆ ಒಂದೆಡೆಯಾದರೆ, ಜಾತಕದಿಂದ ಭವಿಷ್ಯದಲ್ಲಿ ಒಳ್ಳೇದಾಗುತ್ತೆ ಅಂತ ತಿಳಿದುಕೊಂಡು ಬಂದ ಎಷ್ಟೋ ಜೀವಿಗಳು ನಮ್ಮ ಕಣ್ಮುಂದೆ ಇಲ್ಲವೆಂಬ ಸತ್ಯ ನನಗೆ ಗೊಂದಲವನ್ನುಂಟು ಮಾಡಿತ್ತು. ಇದೆಲ್ಲ ಗೊಂದಲದ ನಡುವೆ ನನಗೆ ಸಿಕ್ಕ ಉತ್ತರ ಇಷ್ಟೇ! "ಇವತ್ತು/ ಇಂದು/ ಈ ಕ್ಷಣ ಎಂಬುವುದು ಮಾತ್ರ ಸತ್ಯವೆಂದು". "ನಾಳೆಯ ಪ್ರತಿಕ್ಷಣವನ್ನು ಇಂದು ನೋಡಿದ ವ್ಯಕ್ತಿ ಯಾರು ಇಲ್ಲವೆಂಬ ಸತ್ಯವನ್ನು ಅರಿತು ಇವತ್ತಿನ ಬದುಕನ್ನು ಅದ್ಭುತವಾಗಿ ಬದುಕಿ".

**ಭೂಮಿಕ ಪ್ರದೀಪ್ ಶೆಟ್ಟಿ**

# ನಿನ್ನೆಯ ಹೂಗಳು

ನಿನ್ನೆಯ ಹೂಗಳು
ಗಿಡದ ಒಡಲ ತುಂಬಿ ಅರಳಿದ್ದ
ಅಚ್ಚ ಬಿಳಿ ಮಲ್ಲಿಗೆಯ ಹೂಗಳು
ಇಂದು ಅಂಗಳ ತುಂಬ ಚೆಲ್ಲಿವೆ
ನಕ್ಷತ್ರಗಳು ಬಾನಿಂದ ಉದುರಿ
ಭೂಮಿಯ ಮೇಲೆಲ್ಲ ಚದುರಿ ಬಿದ್ದಂತೆ
ಬದುಕೆಂಬುದಿದೆ ಅದೆಷ್ಟು ವಿಚಿತ್ರ
ನಿನ್ನೆ ಸುಖ ಸಂತೋಷ ನೆಮ್ಮದಿ
ಎಲ್ಲವೂ ಇತ್ತು
ಇಂದು ಎಲ್ಲವೂ ಮರೆಯಾಗಿದೆ
ನನ್ನದು ನನ್ನವರೆಂಬವರು ಯಾರೂ ಇಲ್ಲ
ನಾನಿಂದು ಏಕಾಂಗಿ
ಇಲ್ಲಿ ದೊರಕಿದ್ದು ಇಲ್ಲಿ ಎಟಕಿದ್ದು
ಎಲ್ಲವೂ ಸ್ಥಿರವೆಂದು ಬಗೆದಿತ್ತು
ಹುಚ್ಚು ಮನಸ್ಸು ಒಂದೊಂದೆ
ಬಂಧ ಕಳಚುತ್ತಾ ಹೋದಾಗ ಅರಿವಿಗೆ
ಬಂದಿತ್ತು ಇದೆಲ್ಲವೂ ಕ್ಷಣ ಭಂಗುರವೆಂದು
ಆಗಲೆ ಮಾತ್ರ ಬಹಳ ತಡವಾಗಿ ಹೋಗಿತ್ತು
ಕಣ್ಣೆದುರು ನೂರೊಂದು ನಿದರ್ಶನವಿದ್ದರೂ
ನಾವು ಮಾತ್ರ ಏನನ್ನೂ ಕಲಿಯುವುದಿಲ್ಲ
ನಮ್ಮ ಬದುಕೆ ಒಂದು ಕಥೆಯಾದಾಗ
ಆಸೆಗಳು ಕಳಚಿ ನೆಲಕ್ಕೆ ಬಿದ್ದು ಬಿಡುತ್ತವೆ
ಬದುಕು ನಾವಂದುಕೊಂಡಂತೆ
ಸೂತ್ರಧಾರನ ಕೈ ಚಳಕದಲಿ
ಬದುಕು ಅರಳುತ್ತವೆ ಇಲ್ಲವೆ
ಮುದುಡಿ ಬಾಡುತ್ತವೆ
ನಾವಿಲ್ಲಿ ಬರೇ ನೆಪ ಮಾತ್ರ

**ಡಾ. ಕರುಣಾಕರ ಎನ್. ಶೆಟ್ಟಿ, ಪಣಿಯೂರು**

# FORGOTTEN BUNT WEDDING RITUALS



**Aerya Balakrishna Hegde**

Bunts are believed to be a pre-Vedic community. Having existed even before the advent of Vedic times, the community had developed its own set of rituals for all their festivals and social events. Rituals pertaining to *Nema, Kola* and other ceremonial events were conducted or directed by a senior member of the family or by a person from the community well versed in such rituals. Similarly, the bunt weddings also had a set of pre-Vedic rituals which are almost forgotten now. These weddings were directed, as said earlier, by a senior member of the family or community. That being the case, naturally the *Arachakas (purohits)* had no role to play in a Bunt wedding till as recently as about 40 years ago and as such, even *homas* (sacred fire rituals) were not part of our wedding rituals.

Bunt wedding rituals were not written down or documented in the olden days but were performed as a matter of ongoing tradition. However, I have come across a couple of brief articles during the last couple of decades, one of which was by the Late Hari Poonja. One of the weddings conducted as per old traditions that I attended some years back was the one performed by Sri Ajith & Smt Asha Maladi for their daughter. But still most of the Bunt weddings performed today do not follow the old traditions. Therefore, to enable Bunts to switch back to the forgotten traditions, I have tried to document in an easy to understand manner and in as much detail as possible, a typical old Bunt wedding rituals sequentially in this article. I have done this out of my own understanding as also by collating details obtained from time to time from my maternal uncle and my father in law the late Aerya Lakshminarayana Alva and also from Sri Kudi Vasanth Shetty. I have focussed here specially on the Tulu speaking Bunts while I am sure that the old traditions of the Kannada speaking Bunts from Kundapura area is not much different though I have not had the opportunity of researching on the same.

In this document, I have also mentioned as to who is responsible to perform a particular sequence, items required for each sequence and also as to how the items are to be arranged. It is pertinent to note here that the rituals, the persons responsible and items required may vary slightly from village to village. Kindly bear this aspect in mind while going through this document. With this disclaimer, I proceed to write down the forgotten Bunt wedding rituals in a sequential manner here below:

***Sutthe Deepuni :*** This is the very first step. *Deepuni* means placing a thing in its designated place. *Sutthe* is believed to represent Ganesha. Question naturally arises as to how Ganesha came into picture here if the Bunts followed their own pre-Vedic beliefs. The answer could be that either this was borrowed as an additional ritual from out of Vedic traditions after the advent of Vedic times or that the Bunts also believed in a Deity somewhat similar in form and powers as that of Ganesha. Another school of thought believes that *Swastika* is pronounced in Tulu as *Sutthe.* The word *Swastika* is supposed to represent the Sun God. Without getting into a debate as to which inference is correct, *Sutthe Deepuni* is for sure an act of invoking the Lord and seeking His blessings right in the beginning of the wedding ceremony for the event to go off smoothly without any obstacles.

Items required: *Harivana* (tray) preferably of silver, brass or copper, 1 seer or approx 1 kg rice -preferably parboiled as used in the olden days, coconut with hood intact, 6 betel leaves, two areca nuts, a small string of *Mallige* flower and a bunch of areca flower strings *(Pingara), Mane* (low wooden seating for a single person used in the olden days) and a gold coin or silver or any other coin.

The rice is poured on the *Harivana* and the coconut is placed on top and 3 betel leaves each are kept on either side of the coconut one above the other and an areca nut each is kept on the betel leaves. *Mallige* & areca flowers are arranged in front of the coconut. The coin is placed on the top surface of the coconut. *Harivana* along with the above items are together called *Sutthe.* The *Mane* has to be first placed in the centre at the front edge of the *Mantapa* (wedding platform) and the *Sutthe* is then placed on the *Mane* with the hood of the coconut facing the audience. Assuming that *Sutthe* signifies Ganesha, the coconut hood is supposed to represent the trunk of the Ganesha and the betel leaves kept on either side, the ears.

*Sutthe* is generally placed by the eldest male or female member of the bride's family. It is possible that this honour is given to some other member of the family due to minor variations followed in different villages, as mentioned earlier.

Note: Before placing the *Sutthe,* two chairs or sofas are to be placed on either side towards the front edge of the *Mantapa* to be used as pre-ritual seats by the bride and the groom immediately after their arrival, in addition to the two chairs or sofas placed in the centre of the *Mantapa* for seating the bride & the groom during the rituals.

**Placing the *Dhaare Gindi* :** The *Dhaare Gindi* is a brass pot with a spout.

Items required : *Dhaare Gindi,* water, small quantity of sandalwood paste, one stem of coconut flower, coconut with hood, *Mane* or a decorated stool, *kariamani* and a gold coin or silver or any other coin

The *Gindi* is filled upto about three fourth with fresh clean water with a small quantity of sandalwood paste added to the water. The coin is dropped into the water. The stem of coconut flower is placed inside the mouth of the *Gindi* with the stalk towards the bottom and the flowers spread out in all directions from the mouth of the *Gindi.* Over this, the coconut is kept with the hood up. The *kariamani* is placed around the hood of the coconut. *Dhaare Gindi* containing all the above items is placed on the *Mane* or stool right in front of the seats meant to be used by the bride and groom during the rituals.

Placing the *Dhaare Gindi* is generally performed by the bride's parents.

***Nade Dalya :*** *Nade* means walk and *Dalya* means fresh clean cloth.

Items required: A clean white cloth of about 3 ft width and length as per requirement.

The white cloth is spread on the floor from the entrance of the venue right upto the *Mantapa.* If the entrance of the venue is quite a distance away from the *Mantapa,* the *Dalya* can be spread upto about 5 meters from the *Mantapa* on the walking path. The bride is supposed to arrive walking on this cloth, probably intended to protect the tender feet of the bride or may be to ensure that the bride's feet are not dirtied. The groom also comes in walking on the same *Dalya.*

The spreading of the *Dalya* used to be the job of the *Maddela* (washerman) in the olden days. After the bride & the groom are seated in their pre-ritual seats, *Maddela* removes the *Dalya* and that becomes his property.

***Madmal na Dibbana :*** *Dibbana* means procession & *Madmal* means the bride.

Items required: 3 betel leaves, one areca nut and a traditional band in attendance.

The bride arrives with her family members to the wedding venue in a *Dibbana* to the sound of the traditional band. The *Dibbana* arrives at the venue about half an hour before the scheduled time of the *Muhurtha* (auspicious time fixed for the wedding). The bride has to hold 3 betel leaves and an areca nut placed on top of the betel leaves in her left hand which she will continue to hold till the *Kariamani* ritual is completed.

Bride is led by a *Maami* (aunt) - preferably the eldest from father's side, by holding the bride's right hand with her right hand.

**Washing Bride's Feet :** As the bride arrives at the entrance of the venue her feet are washed.

Items required: *Chombu* (pot) - silver, brass or copper preferred and water.

Generally, a female relative who is younger than the bride performs this act. This privilege may fall upon some other relative, as said earlier, due to variations from village to village.

**Bride's *Aarati* :** *Aarati* for the bride is performed at the entrance of the venue after her feet are washed.

Items required : *Aarati Thatte* (plate), wick, *Yenme* oil (Til / sesame oil), matchbox, *Mallige* flower string, *Kunkuma* holder with *Kunkuma & Arashina* (turmeric) holder with *Arashina.* A candle and camphor powder may also be kept ready. Camphor powder when applied on the tip of the wick makes it easier to light the wick and a candle duly lit will make it easier to light the wick than the match stick.

The *Aarati* is performed by 5 *Muthaides* (married women) from the Bride's side. *Kunkuma* is applied on the bride's forehead by one of the *Muthaides* after the *Aarati* is done.

The bride's *Dibbana* proceeds to the wedding *Mantapa* after the *Aarati* with the bride walking on the *Dalya.* The bride is seated on the pre-ritual seat on the right side of the *Mantapa* (i.e to the left side of the audience). Some elders believe that the bride has to be seated on the left side of the *Mantapa.*

The bride is led to the *Mantapa* by the *Maami* (the same person who led her to the venue)

***Madmaya nu Yedkonuni :*** *Yedkonuni* means welcoming or receiving and *Madmaya* means the Groom.

Items required : 3 betel leaves, one areca nut and the same traditional band in attendance.

The groom's *Dibbana* arrives to the sound of the traditional band about 5 minutes after the bride is seated.

The groom also has to hold 3 betel leaves and an areca nut placed on top of the betel leaves in his left hand which he too will continue to hold till the *Kariamani* ritual.

As conducting the wedding is generally the responsibility of the bride's parents, the *Dibbana* of the groom is welcomed at the entrance of the venue by the bride's parents, family and close relatives.

The groom is led by his brother in law (sister's husband) by holding the groom's right hand with his right hand.

**Washing groom's Feet :** The groom's feet are washed at the entrance of the venue.

Items required: *Chombu* and water. (The *Chombu* used earlier for washing the bride's feet can also be used)

Washing of the feet is performed by the younger brother of the bride.

**Groom's *Aarati*** - *Aarati* for the groom is performed at the entrance of the venue.

Items required: Items as listed earlier for Bride's *Aarati* or the same *Aarati thatte* with other items can be used again after cleaning and replacing the wick.

The bride's mother and 4 more *Muthaides* from the bride's side perform the *Aarati. Kunkuma* is

applied on the groom's forehead after *Aarati* by bride's mother.

The groom's *Dibbana* proceeds to the wedding *Mantapa* after the *Aarati,* with the groom walking on the *Dalya.* The groom is seated on the pre-ritual seat on the left side of the *Mantapa.* However, as said earlier, if the bride is seated on the left side, as is followed by some families, the groom will be seated on the right side.

***Sutthu Barpuni :*** *Sutthu Barpuni* means walking in a circular fashion or *Pradakshine* in Kannada.

The groom and the bride are led around the *Dhaare Gindi* 3 times with the groom walking ahead of the bride.

The groom's sister leads the bride and her spouse leads the groom. Right hands of the groom and the bride will have to be held with the right hand of the one who leads.

***Maale Pagapuni :*** *Maale Pagapuni* means exchanging of the garlands.

Items required : 2 garlands

At this stage, the bride and the groom exchange garlands. The bride garlands the groom first followed by the groom. The groom stands facing east and the bride facing west. Facing directions may be the other way round as followed in some villages.

Nowadays, the groom in jest tries to lean back or jump up when the bride is about to garland. However, as there were some instances of the garland falling on the floor when the bride tried to throw the garland around the groom's neck to counter his teasing. As this could be construed as inauspicious, it is better to avoid such playful acts in the midst of such sacred rituals.

**Blessings for *Dhaare :*** The *Dhaare Gindi* is taken around to the audience for their blessings and brought back to the *Mantapa.* This is performed by the Bride's parents. In the olden days, the maternal uncle of the bride and his spouse used to perform this auspicious ritual as the maternal uncle, as *Yajamana* of the family, was responsible to perform the weddings of all his nieces, nephews and other family members as per the *Aliyasantana* traditions.

***Dhaare Eraavuni :*** *Dhaare Eraavuni* means raising of the *Dhaare.*

Once the *Dhaare Gindi* is brought back to the *Mantapa,* holding the *Dhaare Gindi,* the parents come to the centre of the stage and announce loudly to the audience as follows:

*"Dhaare eraava... Dhaare eraava ...Dhaare eraava"* (meaning permit us to raise the *Dhaare*)

The audience is expected to reply as follows:

*"Aavu panpa...Aavu panpa ... Aavu panpa"* (meaning yes, you have our permission)

This is typically taking the permission for raising the *Dhaare* from the relatives, friends and guests who have gathered to witness the wedding.

The *Dhaare Gindi* is then raised from the floor to above the head, as the bride & the groom witness the same. This signifies seeking of blessings from all the 5 sacred elements – earth *(Prithvi),* water *(Jala),* fire *(Agni),* air *(Vaayu)* and space *(Aakasha).* It will be of interest to note here that the Bunts had a tradition of revering all the 5 elements of nature from time immemorial. This important and sacred step of the wedding ritual has to be performed precisely at the auspicious time fixed *(Muhurtha).* The ritual may be performed by the parents of the bride & the groom together. In the olden days, the bride's maternal uncle and his spouse used to perform the same. Once the ritual is over, the water is disposed off at the base of the coconut tree or any other fruit bearing tree.

Some other communities follow *Kanya Daana* or *Dhaare Mypuni* in which the sacred water from the *Dhaare Gindi* is poured on the palms of the bride & the groom signifying 'giving away' *(Daana)* of the girl. After *Kanya Daana,* the bride is supposed to belong to the groom's family and in some communities even the name of the bride is changed. But in case of Bunts, the girl is not 'given away' and instead she continues to belong to her mother's family as per *Aliyasantana* traditions.

**Blessings for the *Kariamani* (or *Karimani) :*** *Kariamani* is the necklace with blackbeads which is considered very sacred.

The *Kariamani* kept on the *Dhaare Gindi* is taken out and blessings are sought from 5 senior *Muthaides.*

This is performed by the bride's mother.

***Kariamani Kattuni :*** *Kariamani Kattuni* means tying of the *Kariamani.*

In this important segment of the wedding, the groom adorns the *Kariamani* around the bride's neck, after which the bride and groom become man and wife or considered married.

***Aarati* for the couple :** *Aarati* of the newly married couple is performed after tying of the *Kariamani.* Nowadays an *Aarati* song is sung live or played in the background which in my opinion is not a bad idea to continue.

Items required: Items as listed earlier for bride's *Aarati* or the same *Aarati thatte* with other items can be used again after cleaning and replacing the wick.

The *Aarati* is performed by 5 *Muthaides. Kunkuma* is applied on the bride and the groom's forehead after *Aarati* by all those who performed *Aarati.* Thereafter, the couple occupy their designated seats in the centre of the *Mantapa* with the groom seated on the right and the bride on his left.

***Sese Paaduni :*** *Sese* is the sacred rice or *Akshate* in Kannada and *Paaduni* means showering as a form of blessings.

Items required: Rice (preferably parboiled – as in the olden days) mixed with *Kunkuma* and *Arashina, Harivana* (tray) and a decorated stool. Quantity of rice should to be sufficient so as to last till the wishing by the last guest.

The rice mixed with *Kunkuma* and *Arashina* is poured on the tray and the same is placed in front of the couple on the decorated stool. After placing the *Sese* tray, the guests are invited to wish or bless the couple by showering *Sese.* Refilling of the *Sese* tray on a continuous basis to be ensured so that rice is available in the tray till the wishing by the last guest.

The guests are served with vegetarian lunch / dinner after they have wished the couple.

Placing of the *Sese* is the privilege of the eldest married female member from the bride's side. In the olden days, for weddings held in Mangalore, the eldest female member from Kudalda Guthu had the privilege of placing the *Sese* plate.

***Dompa Japudavuni :*** *Dompa* means wedding platform or *Mantapa* and *Japudavuni* means getting alighted.

Items required: *Chombu* and water (the *Chombu* used earlier for washing bride & groom's feet can also be used again), gift / cash, tender coconut, knife for piercing and straw (only if required)

